ಸಾಕ್ಷಿ ಯನ್ನು ದಿಃ 06.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿದ್ದು, ಅವುಗಳನ್ನು ನಾನೇ ನನ್ನ ವಕೀಲರಿಗೆ ಹೇಳಿ ಬರೆಸಿ, ಅದರಲ್ಲಿರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೇನೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

1. ದಿಃ 12.08.2022 ರಂದು ಪ್ರದೀಪ್ ಹಾಗೂ ಮಾದೇಗೌಡು ಮಾಡಿಕೊಂಡ ಸ್ವಾಧೀನ ರಹಿತ ಕ್ರಯ ಕರಾರು ಪತ್ರವನ್ನು ನಿಪಿ - 1 ಎಂದು,
2. ದಿಃ 07.03.2024 ರ ತಿಳುವಳಿಕೆ ಪತ್ರವನ್ನು ನಿಪಿ - 2 ಎಂದು,
3. 2 ಅಂಚೆ ರಶೀದಿಗಳನ್ನು ನಿಪಿ - 3 ಮತ್ತು 4 ಎಂದು,
4. 2 ಅಂಚೆ ಸ್ವೀಕೃತಿಗಳನ್ನು ನಿಪಿ - 5 ಮತ್ತು 6 ಎಂದು,
5. ಕೊತ್ತವಳ್ಳಿ ಗ್ರಾಮದ ಸ.ನಂ.173/9 ರ 2021-22 ರಿಂದ 2025-26 ರವರೆಗಿನ ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ - 7 ರಿಂದ 11 ಎಂದು,
6. ಕೊತ್ತವಳ್ಳಿ ಗ್ರಾಮದ ಸ.ನಂ.173/16 ರ 2021-22 ರಿಂದ 2025-26 ರವರೆಗಿನ ಪಹಣಿ ಪತ್ರಿಕೆಗಳನ್ನು ಕ್ರಮವಾಗಿ ನಿಪಿ - 12 ರಿಂದ 16 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ